ಅವರ ಹೆಸರಿಗೆ ಮಸಿ ಬಳಿಯಬೇಕೆಂದು ಹೊರಟಿದ್ದಾರೆ. ಕಳೆದ ಚುನಾವಣೆ ಸಮಯದಲ್ಲಿ ರಾಜಕುಮಾರ್ ಅವರ ಭಾವಚಿತ್ರವನ್ನು ಉಪಯೋಗಿಸಿಕೊಂಡು ಅವರ ಹೆಸರಿನಿಂದ ಕೆಲವರು ಗೆದ್ದು ಬಂದಿದ್ದಾರೆ, ಆದರೆ ಇವೊತ್ತು ಅವರ ಹೆಸರಿಗೆ ಮಸಿ ಬಳಿಯಲು ಮತ್ತು ಅವರ ಅಭಿಮಾನಿಗಳನ್ನು ಬಗ್ಗು ಬಡಿಯಲು ಪೋಲೀಸರನ್ನು ಉಪಯೋಗಿಸಿಕೊಂಡು ಒಂದು ವ್ಯವಸ್ಥಿತ ರೀತಿಯಿಂದ ಕೆಲಸ ಮಾಡುತ್ತಿದ್ದಾರೆ. ಈ ಒಂದು ಘಟನೆಯಲ್ಲಿ ಜನತಾಪಕ್ಷದ ಕಾರ್ಯಕರ್ತರು ಹಿಂದಿನ ಬಾಗಿಲಿನಿಂದ ಶಾಮೀಲಾಗಿದ್ದಾರೆ. ಈ ಬಗ್ಗೆ ಕೂಡಲೇ ಸರ್ಕಾರದವರು ತನಿಖೆ ಮಾಡದಿದ್ದರೆ ಕರ್ನಾಟಕ ರಾಜ್ಯದಲ್ಲಿರುವ ಕನ್ನಡ ಜನರೆಲ್ಲರೂ ರೊಚ್ಚಿಗೇಳುತ್ತಾರೆ. ಇದಕ್ಕೆ ಅವಕಾಶವಾಗದಂತೆ ಸರ್ಕಾರದವರು ಕೂಡಲೇ ಒಂದು ಹೇಳಿಕೆ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ರಾಜಕುಮಾರ್ ಅಭಿಮಾನಿಗಳ ಸಂಘದ ಕೇಂದ್ರ ಕಛೇರಿಯ ಮೇಲೆ ಪೋಲೀಸರು ಅತಿಕ್ರಮಣ ಮಾಡಿ ಅಲ್ಲಿದ್ದ ರಾಜಕುಮಾರ್ ಅಭಿಮಾನಿಗಳನ್ನು ಕಾನೂನುಬಾಹಿರವಾಗಿ ಬಂಧಿಸಿದ್ದಾರೆಂಬ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಎತ್ತಿದ್ದಾರೆ. ಇದರ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ. ಸರ್ಕಾರ ಮಾಹಿತಿ ತರಿಸಿಕೊಂಡು ಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತದೆ. ಇನ್ನೊಂದು ಮಾತನ್ನು ಹೇಳುವುದಾದರೆ, ರಾಜಕುಮಾರ್ ಅವರ ಬಗ್ಗೆ ನನ್ನ ಗೆಳೆಯರಿಗೆ ಎಷ್ಟು ಅಭಿಮಾನ ಮತ್ತು ಗೌರವ ಇದೆಯೋ ಅದಕ್ಕಿಂತ ಹೆಚ್ಚು ಇಲ್ಲದಿದ್ದರೂ ಸಹ ಅಷ್ಟೇ ಅಭಿಮಾನ ಮತ್ತು ಗೌರವ ಸರ್ಕಾರಕ್ಕೂ ಇದೆ. ಜನತಾಪಕ್ಷಕ್ಕೂ ಇದೆ. ಈ ಕಡೆ ಇರುವ ಎಲ್ಲಾ ಸದಸ್ಯರಿಗೂ ಇದೆ. ಆದ್ದರಿಂದ ಅವರ ಹೆಸರಿಗೆ ಅಗೌರವ ತರುವ ವಿಚಾರ ಸರ್ಕಾರಕ್ಕಿಲ್ಲ. ಅವರ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ಸರ್ಕಾರ ಯಾವುದೇ ಕೆಲಸ ಮಾಡಿಲ್ಲ ಮತ್ತು ಜನತಾಪಕ್ಷವೂ ಸಹ ಮಾಡಿಲ್ಲ. ಈಗ ನಡೆದಿರುವ ಘಟನೆಯ ಬಗ್ಗೆ ವಿವರಗಳು ಇಲ್ಲದಿರುವ ಕಾರಣ ಎಲ್ಲಾ ವಿವರಗಳನ್ನು ಮತ್ತು ಮಾಹಿತಿಗಳನ್ನು ಪಡೆದುಕೊಂಡು ಸರ್ಕಾರ ಒಂದು ಹೇಳಿಕೆ ಕೊಡುತ್ತದೆ.

IV) ಅಗತ್ಯ ವಸ್ತುಗಳ ಕಾಯಿದೆ ಮೇರೆಗೆ ದಾಳಿ ಮತ್ತು ಹಾಕಿರತಕ್ಕ ಮೊಕದ್ದಮೆಗಳ ಬಗ್ಗೆ

ಶ್ರೀ ಪಿ. ರಾಮದೇವ್.— ಮಾನ್ಯ ಅಧ್ಯಕ್ಷರೇ, ಸುಮಾರು ಐದಾರು ತಿಂಗಳುಗಳಿಂದ ಈ ರಾಜ್ಯದಲ್ಲಿರುವ ಅನೇಕ ಅಕ್ಕಿಗಿರಣಿಗಳ ಮೇಲೆ ಮತ್ತು ಸಗಟು ವರ್ತಕರ ಕೆಲವು ಮಳಿಗೆಗಳ ಮೇಲೆ ಸರ್ಕಾರದವರು ಸಾಕಷ್ಟು ಶೋಧನೆ ಮಾಡುವುದರ ಮೂಲಕ ಅವರು ಬಚ್ಚಿಟ್ಟ ಆಹಾರಧಾನ್ಯಗಳನ್ನು ವಶಪಡಿಸಿಕೊಂಡಿದ್ದಾರೆ. ಇದು ಬಹಳ ಮೆಚ್ಚತಕ್ಕ ವಿಚಾರ. ಬಚ್ಚಿಟ್ಟ ಆಹಾರವನ್ನು ಹೊರತೆಗೆಸಿದ್ದಕ್ಕೆ ಮಾನ್ಯ ಆಹಾರ ಸಚಿವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕು. ಈ ರೀತಿ ವಶಪಡಿಸಿಕೊಂಡು ಆಹಾರಧಾನ್ಯಗಳನ್ನು ಯಾವರೀತಿ ವಿತರಣೆ ಮಾಡಲಾಯಿತು, ಯಾರಯಾರ ಮೇಲೆ ಎಷ್ಟೆಷ್ಟು ಕೇಸ್ ಗಳನ್ನು ಹಾಕಲಾಯಿತು, ಎಷ್ಟು ಮೊಕದ್ದಮೆಗಳು ದಾಖಲಾಗಿವೆ ಹಾಗೂ ಅಗತ್ಯ ವಸ್ತುಗಳ ಕಾಯಿದೆ ಮೇರೆಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಮನೆಗೆ ಮಾನ್ಯ ಆಹಾರ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

೧೨-೩೦ ಪಿ. ಎಂ.

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಕೊಡುವುದಾದರೆ ಅಗತ್ಯವಸ್ತುಗಳ ಕಾಯ್ದೆಯ ಪ್ರಕಾರ ಜನವರಿ ೧೯೮೩ರಿಂದ ನವೆಂಬರ್ ೮೩ರ ವರೆಗೆ ಸುಮಾರು ೩,೪೬೧ ದಾಳಿಗಳನ್ನು ನಡೆಸಿರುತ್ತಾರೆ. ಇದರಲ್ಲಿ ಸುಮಾರು ೫೫೪ ಜನರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅವರಲ್ಲಿ ಸುಮಾರು ೨೨೦ ಜನರಿಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ೬೫ ಜನರಿಗೆ ಶಿಕ್ಷೆಯನ್ನು ವಿಧಿಸಿರುತ್ತಾರೆ. ಈ ಸಂಬಂಧದಲ್ಲಿ ಸುಮಾರು ೪.೭೭ ಕೋಟಿ ರೂಪಾಯಿಗಳ ಅಗತ್ಯ ವಸ್ತುಗಳು ಸರ್ಕಾರದ ವಶಕ್ಕೆ ಬಂದಿವೆ. ಮತ್ತೆ ಸುಮಾರು ೧,೭೭,೬೫೫ ಕ್ವಿಂಟಾಲ್ ಅಗತ್ಯ ವಸ್ತುಗಳನ್ನು ಸರ್ಕಾರದವರು ನಾನಾ ಕಡೆಯಿಂದ ವಶಪಡಿಸಿಕೊಂಡಿರುತ್ತಾರೆ.